ವಿಜಯವಾಣಿ
ಕನ್ನಡಿಗರ ಧ್ವನಿ

# ಅರ್ಚನಾ ಕಾಮತ್‌ಗೆ ರಾಷ್ಟ್ರೀಯ ಸ್ವರ್ಣ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರ್ನಾಟಕದ ಅರ್ಚನಾ ಕಾಮತ್ 18 ವಯೋಮಿತಿಯ ಜೂನಿಯರ್ ಬಾಲಕಿಯರ ರಾಷ್ಟ್ರೀಯ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ. ಶುಕ್ರವಾರ ನಡೆದ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಅರ್ಚನಾ 11-8, 8-11, 8-11, 11-8, 12-10, 11-4 ರಿಂದ ಮಹಾರಾಷ್ಟ್ರದ ಶೃತಿ ಹಳೆಯಂಗಡಿಯನ್ನು ಮಣಿಸಿದರು.



ಇದು ಅರ್ಚನಾ ಕಾಮತ್‌ಗೆ ಹಾಲಿ ವರ್ಷದ 2ನೇ ರಾಷ್ಟ್ರೀಯ ಚಿನ್ನದ ಪದಕವಾಗಿದೆ. ಇತ್ತೀಚೆಗೆ ಸಿಲಿಗುರಿಯಲ್ಲಿ ನಡೆದ ಪೂರ್ವ ವಲಯ ರಾಷ್ಟ್ರೀಯ ಟೂರ್ನಿಯಲ್ಲಿ ಅರ್ಚನಾ ಚಾಂಪಿಯನ್ ಆಗಿದ್ದರು. ಉಪಾಂತ್ಯ ಹೋರಾಟದಲ್ಲೂ ಮಿಂಚಿದ್ದ ಅರ್ಚನಾ 4-1ರಿಂದ ಪಶ್ಚಿಮ ಬಂಗಾಳದ ಪ್ರಾಪ್ತಿ ಸೇನ್‌ರನ್ನು ಸೋಲಿಸಿದ್ದರು.